ಅಂದು ತಾರೆಯೊಂದು ಭೂರಮೆಗೆ ಇಳಿದು ರಾಜಸ್ತಾನದ ಮೇಡತ ನಗರದ ಕುಡ್ಕಿ ಊರಿನಲ್ಲಿ ರಾಜಮನೆತನದ ದಂಪತಿಯಾದ ರತನ್ ಸಿಂಗ್ ರಾಥೋಡ್ ಹಾಗೂ ವೀರ್ ಬಾಯಿಯ ಮಡಿಲು ತುಂಬಿತು.

ವಿಪ್ರರನು ಕರೆಸಿ ಕುಂಡಲಿ ಬರೆಸಿದಾಗ ಈ ಮಗುವಿಗೆ ಭವ್ಯ ಭವಿಷ್ಯ ವಿರುವುದು, ರಾಜ ಮನೆತನದ ಸೊಸೆಯಾಗುವಳು. ಆದರೆ ವಿರಾಗಿನಿಯಾಗಿ ಪರಮಾತ್ಮನ ಸಾನಿಧ್ಯ ಪಡೆಯುವಳು ಎಂದು ತಿಳಿದು ಬಂದಾಗ ಹೆತ್ತವರಿಗೆ ಆತಂಕವಾಗಿತ್ತು.

ವಿಧಿ ನಿಯಮವನ್ನು ಬದಲಾಯಿಸಲಾಗುವುದಿಲ್ಲ ಎಂದುಕೊಂಡು ನಾಮಕರಣವನ್ನು ಮಾಡಿ ಗೊಂಬೆಯಂತಿದ್ದ ಮಗುವಿಗೆ ಮೀರಾ ಎಂದು ಹೆಸರಿಟ್ಟರು. ಮೀರಾ ಅಂಬೆಗಾಲಿಡುತ್ತಾ ತನ್ನ ಆಟಪಾಠಗಳಿಂದ ಮನೆ ಮಂದಿಯನ್ನು ರಂಜಿಸುತ್ತಾ ತೊದಲ್ನುಡಿಗಳನ್ನು ಆಡುತ್ತಿದ್ದು ನಂತರದ ಐದು ವರ್ಷಗಳಿಗೆ ಕಾಲಿರಿಸಿದ್ದಳು. ನಿಚ್ಚಳವಾದ ಬಾನಂಗಳದಲ್ಲಿ ದಿನಕರನು ತನ್ನ ಕಿರಣಗಳ ಹರವಿಕೊಳ್ಳುತ್ತಾ ತನ್ನ ಅನುದಿನದ ದಿನಚರಿಯನ್ನು ಆರಂಭಿಸಿದ್ದ. ಕೂಜನದ ಇಂಚರ ಮುಗಿಲು ಮುಟ್ಟುವಂತಿತ್ತು. ಜನತೆ ನಿದ್ರೆಯ ಜಡವನ್ನು ಹೋಗಲಾಡಿಸಿಕೊಂಡು ನಿತ್ಯ ಕೃತ್ಯಗಳಲ್ಲಿ ತೊಡಗಿದ್ದರು.

ಪುಟ್ಟ ಮೀರಾ ಅಂಗಳದ ಉದ್ಯಾನದಲ್ಲಿ ಅರಳಿದ್ದ ವೈವಿಧ್ಯತೆಯ ಕುಸುಮಗಳಿಂದ ನವಿರಾದ ಬೆರಳುಗಳಿಂದ ಮಾಲೆ ಕಟ್ಟಿ ತನ್ನ ಆರಾಧ್ಯ ದೈವ ಕೃಷ್ಣನಿಗೆ ಮಾಲೆ ಹಾಕಿದಳು. ಮಾತೆಯಿಂದ ಕಲಿತ ಆರತಿಯ ಗೀತೆಯನ್ನು ಪುಟ್ಟಸ್ವರದಲ್ಲಿ ಹಾಡುತ್ತಾ ಆರತಿಯನ್ನು ಬೆಳಗಿದಳು. ಪೂಜೆ ಪೂರೈಸಿದ ಮೇಲೆ ಮಾತೆಯೊಡನೆ ಉಪಾಹಾರ ಸೇವಿಸಿದಳು. ಅಂದು ಯುದ್ಧ ಭೂಮಿಯಲ್ಲಿ ರಣಕಹಳೆ ಮೊಳಗಿತ್ತು. ಆನೆಗಳು ಘೀಳಿಟ್ಟವು, ಕುದುರೆಗಳು ಕೆನೆಯುತ್ತಾ ಹೇಷಾರವಗೈದಿದ್ದವು. ರಜಪೂತರಲ್ಲಿ ಕದನಗಳು ಸರ್ವೇ ಸಾಮಾನ್ಯ. ಮೀರಾಳ ಪಿತ ಮೊಘಲರೊಡನೆ ಆ ದಿನಗಳಲ್ಲಿ ಸಂಭವಿಸಿದ್ದ ಸಂಗ್ರಾಮಕ್ಕೆ ತೆರಳಿದ್ದರು.

ಅಂದಿನ ಇರುಳಿನಲ್ಲಿ ಚಂದ್ರಮನು ಆಗಸದ ಅಂಗಣದಲ್ಲಿ ದಿವ್ಯ ಕಾಂತಿಯಿಂದ ಮೂಡಿದ್ದನು. ತಾರಾಮಣಿಗಳು ತೇಜೋಪುಂಜರಾಗಿ ಬೆಳ್ಳಿಯ ಆರತಿ ಬೆಳಗುತ್ತಿದ್ದರು. ನಭಾಂಗಣದಲ್ಲದೆ ಭೂರಮೆಯ ಅಂಗಳವೂ ಪರಿಶೋಭಿಸಿತ್ತು. ಮೀರಾಳಿಗೆ ಹೊರಗಿನಿಂದ ಬಾಜಾ ಭಜಂತ್ರಿಗಳ ಸದ್ದು ಕೇಳಿ ಬಂದಿತ್ತು. ಕುತೂಹಲ ಭರಿತಳಾಗಿ ಮಾತೆಯ ಹಸ್ತವನ್ನು ಹಿಡಿದು ಉಪ್ಪರಿಗೆಗೆ ತೆರಳಿ ಕೆಳಗೆ ದೃಷ್ಟಿ ಹಾಯಿಸಿದಾಗ ತಲೆಗೆ ರುಮಾಲು ಧರಿಸಿ ಸುಂದರವಾದ ಉಡುಪನ್ನು ಧರಿಸಿದ್ದ ಯುವಕ, ಶ್ವೇತ ವರ್ಣದ ಅಶ್ವದ ಮೇಲೆ ವಿರಾಜಮಾನ ನಾಗಿದ್ದನು. ಮಹಿಳೆಯರು ಮತ್ತು ಪುರುಷರು ಹಾಡುತ್ತಾ ಕುಣಿಯುತ್ತಿದ್ದರು. ಐದು ವರುಷದ ಪೋರಿ ಮೀರಾ, ಯಾರು ಹೀಗೆ ಸಾಗುತ್ತಿರುವುದು ಎಂದು ಮಾತೆಯನ್ನು ಪ್ರಶ್ನಿಸಿದಾಗ ಮಾತೆ, ನನ್ನ ಮುದ್ದಿನರಗಿಣಿಯೇ, ಅದು ವಿವಾಹದ ದಿಬ್ಬಣ, ವಧುವಿನ ನಿವಾಸಕ್ಕೆ ತೆರಳುತ್ತಿರುವುದು ಎಂದು ತಿಳಿಸಿದಳು. ಆಗ ಮೀರಾ ನನ್ನ ವಿವಾಹ ಎಂದು ಕೇಳಿದಳು.

‘ನೀನಿನ್ನು ಪುಟ್ಟವಳು, ಬೆಳೆದ ನಂತರದಲ್ಲಿ ನಿನ್ನ ವಿವಾಹ ಎಂದು ನಸುನಗುತ್ತಲೇ ಅರುಹಿದಳು ಮಾತೆ. ಮೀರಾ ಹಾಗಾದರೆ ನನ್ನ ವಿವಾಹ ಯಾರೊಡನೆ ಎಂದು ಮತ್ತೆ ಮತ್ತೆ ಪ್ರಶ್ನೆಗಳ ಸುರಿಸಿದಾಗ, ಮಾತೆಗೆ ಆ ಕ್ಷಣದಲ್ಲಿ ಏನೂ ತೋಚದೆ, ಒಳಗಿದ್ದ ಕಪ್ಪು ಕಲ್ಲಿನಲ್ಲಿ ಕಡೆದಂಥ ಸುರ ಸುಂದರಾಂಗ ಶ್ರೀ ಕೃಷ್ಣನ ವಿಗ್ರಹವನ್ನು ಪುತ್ರಿಯ ಹಸ್ತದಲ್ಲಿರಿಸಿದಳು. ಮೀರಾ ಆ ಮೂರ್ತಿಯನ್ನು ಕಣ್ಣೆವೆಗಳ ಪಿಳುಕಿಸದೆ ತದೇಕಚಿತ್ತಳಾಗಿ ವೀಕ್ಷಿಸಿ, ಪುಳಕಿತಳಾಗಿ ಮೋಹನನ ವಿಗ್ರಹವನ್ನು ಎದೆಗವಚಿಕೊಂಡು ತನ್ನ ಕೋಣೆಗೆ ತೆರಳಿದಳು. ಮಾತೆಯ ನುಡಿಯೇ ವೇದ ವಾಕ್ಯದಂತೆ ಪರಿಣಮಿಸಿ, ಅಂದಿನಿಂದ ಆ ದಿವ್ಯ ಮೂರ್ತಿಗೆ, ಶ್ರೀಗಂಧವನಿಟ್ಟು ಕಸ್ತೂರಿ ತಿಲಕವಿಟ್ಟು, ಕಂಪಿನ ಸುಮಗಳಿಂದ ಮಾಲೆ ಕಟ್ಟಿ ಪೂಜಿಸುತ್ತಾ, ಪತಿಯೆಂದು ಭಾವಿಸುತ್ತಾ, ಹೃದಯ ಕಮಲದಲ್ಲೂ ಪ್ರತಿಷ್ಠಾಪಿಸಿಕೊಂಡಳು.

ಆ ನಯನ ಮನೋಹರನ ವಿಗ್ರಹವನ್ನು ರಾಯ್ ದಾಸ್ ಎಂಬ ಸಾಧು ವರ್ಯರು ಮೀರಾಳ ಹೆತ್ತವರಿಗೆ ನೀಡಿದ್ದರು. ಮೀರಾ ಅವರನ್ನು ಗುರು ಎಂದು ಸ್ವೀಕರಿಸಿದ್ದಳು. ಮುಂದೆ ಕೆಲವು ದಿನಗಳಲ್ಲಿಯೇ ಅವಳ ಮಾತೆ ಅಸ್ವಸ್ಥತೆಯ ಕಾರಣದಿಂದ ಮರಳಿ ಬಾರದೂರಿಗೆ ಪಯಣಿಸಿದ್ದಳು. ಮೀರಾಳ ಅಳಲಿಗೆ ಕೊನೆ ಇರಲಿಲ್ಲ. ಆ ದುಃಖದಲ್ಲಿರುವಾಗಲೇ ಮತ್ತೊಂದು ಬರಸಿಡಿಲು ಎರಗಿತು. ಸಂಗ್ರಾಮಕ್ಕೆ ತೆರಳಿದ್ದ ಅವಳ ಪಿತ ಶತ್ರುಗಳೊಡನೆ ವೀರಾವೇಷದಿಂದ ಕಾದಾಡುತ್ತಲೇ ವೀರಸ್ವರ್ಗವನ್ನು ಸೇರಿದ್ದರು. ಮೀರಾ ಮತ್ತೊಮ್ಮೆ ಅನಾಥೆಯಾದಳು ಹೆತ್ತವರನ್ನು ಕಳೆದುಕೊಂಡು. ವೇದನೆ ಉಮ್ಮಳಿಸುತ್ತಿತ್ತು.

ರಾಜ್ಯದ ಮಹಾರಾಜರಾಗಿದ್ದ ಅವಳ ಅಜ್ಜ ರಾವ್ ದೂದಾಜಿ ಮೊಮ್ಮಗಳನ್ನು ತಮ್ಮ ಆಶ್ರಯದಲ್ಲಿ ಯಾವ ಕುಂದುಕೊರತೆ ಇಲ್ಲದಂತೆ ಸಲಹುತ್ತಿದ್ದರು. ಮತ ಧರ್ಮಗಳ, ಸರ್ಕಾರ, ರಾಜಕೀಯ ಮುಂತಾದವುಗಳ ಮನದಟ್ಟು ಮಾಡಿಸಿದ್ದರು. ವಿಧಿ ವಶದಲ್ಲಿ ಮುಂದೊದಗಿ ಬಂದಿದ್ದ ಯುದ್ಧದಲ್ಲಿ ಹತರಾಗಿ ಹೋದರು. ರಣರಂಗದಲ್ಲಿ ಹೋರಾಡಿದ್ದ ಹುತಾತ್ಮರಿಗಾಗಿ ಇಳೆ ಎಂಬ ಮಂದಾಕಿನಿಯ ಮೋರೆಯಲ್ಲಿ ಹೆಮ್ಮೆಯಿಂದ ಮಂದಹಾಸ ಮಿನುಗಿತ್ತು. ಆದರೆ ಮೀರಾಳ ಮುಖದಲ್ಲಿ ದುಃಖ ಮಡುಗಟ್ಟಿತ್ತು. ಅವಳ ದೊಡ್ಡಪ್ಪ, ದೊಡ್ಡಮ್ಮ ಮೀರಾಳನ್ನು ತಮ್ಮ ಮಡಿಲಿಗೆ ತಂದುಕೊಂಡು, ಮಮತೆ ವಾತ್ಸಲ್ಯಗಳ ತೊಟ್ಟಿಲಲ್ಲಿ ತೂಗುತ್ತಿದ್ದರು. ಆದರೂ ಹೆತ್ತವರನ್ನು ಕಳೆದುಕೊಂಡಿದ್ದ ಅನಾಥ ಪ್ರಜ್ಞೆ ಕಾಡತೊಡಗಿದಾಗ, ಮುದ್ದು ಮಾಧವನ ಮೊರೆ ಹೋಗುತ್ತಿದ್ದಳು. ಕಾಲ ಯಾರಿಗೂ ಕಾಯುವುದಿಲ್ಲ, ಕರ್ತವ್ಯವನ್ನು ಇನಿತೂ ತಪ್ಪದೆ ಪರಿಪಾಲಿಸುತ್ತಿರುತ್ತಾನೆ. ಹೀಗೆ ಹಲವಾರು ವಸಂತಗಳು ಅರಳುತ್ತಾ, ಉರುಳುತ್ತಿದ್ದ ಕಾಲಘಟ್ಟಗಳಲ್ಲಿ ಮೀರಾ ಹದಿನಾರರ ಚಂದದ ಯುವತಿಯಾದಳು.

ಅವಳ ಮೀರಾಳ ಅಪ್ರತಿಮ ಸ್ನಿಗ್ಧ ಸೌಂದರ್ಯ ಎಲ್ಲೆಡೆಗಳಲ್ಲಿ ಪ್ರಶಂಸನೀಯವಾಗಿ ಜನತೆಯ ನಾಲಿಗೆಗಳಲ್ಲಿ ನಲಿದಾಡುತ್ತಿದ್ದರೂ ಸರಳತೆಯೇ ಮೈವೆತ್ತಿ ಹಾಗೂ ಮನ ಮೋಹನನತ್ತ ಚಿತ್ತ ಹರಿಸುತ್ತಿದ್ದ ದೈವಿಕ ಕಳೆ ರಾರಾಜಿಸಿತ್ತು. ಕೆಲವರು ಮೀರಾ ಕೃಷ್ಣ ಪರಮಾತ್ಮನ ಪರಮಭಕ್ತೆ. ಅವಳ ಜೀವನವೆಲ್ಲಾ ಕೇವಲ ಅವನಿಗೆ ಮಾತ್ರ ಮೀಸಲು ಎಂದು ಮನಗಂಡಿದ್ದರು. ರಜಪೂತ ಕುವರಿಗೆ ಅನುಗುಣವಾಗಿ, ಗೃಹಕೃತ್ಯ ಸಂಗೀತ ಕರಕುಶಲ ಕಲೆಗಳ ಅವಿನಾಭಾವದೊಡನೆ ಸಮರಕಲೆಗಳಾದ ಕತ್ತಿವರಸೆ, ಕುದುರೆ ರಥಗಳ ಏರುವಿಕೆ, ರಣತಂತ್ರ ಮುಂತಾದವುಗಳಲ್ಲಿ ನಿಷ್ಣಾತಳಾದಳು. ಆದರೆ ಅಂದಿನ ದಿನಗಳಲ್ಲಿ ಮಹಿಳೆಯರು ಸಮರಗಳಲ್ಲಿ ಭಾಗವಹಿಸಬಾರದ ನಿಯಮವಿತ್ತು. ಪೋಷಕರಾಗಿದ್ದ ದೊಡ್ಡಪ್ಪ, ದೊಡ್ಡಮ್ಮ ಕನ್ಯಾದಾನಕ್ಕಾಗಿ ಹಂಬಲಿಸಿದ್ದವರಿಗೆ ಸುಸಮಯವೂ ಅದಾಗಿಯೇ ಒದಗಿ ಬಂದಿತ್ತು. ಮೇವಾಡದ ಚಿತ್ತೋಡ್ ಘಡ್ ಅಧಿಪತಿ ರಾಣಾ ಸಂಗ್ರಾಮ ಸಿಂಗನ ಕುವರ ಭೋಜರಾಜನೊಡನೆ ವಿವಾಹ ಪ್ರಸ್ತಾಪವೇರ್ಪಟ್ಟು, ಹಿರಿಯರ ಪರಸ್ಪರ ಒಪ್ಪಿಗೆಯಿತ್ತರೂ, ಬಾಲ್ಯದಿಂದಲೂ ಚಿತ್ತ ಚೋರ ಶ್ಯಾಮಸುಂದರನನ್ನು ಪತಿಯೆಂದು ಪರಿಭಾವಿಸಿದ್ದ ಪ್ರಾಂಜಲ ಪ್ರೇಮ ಮೊಳೆತು ಬಲಿಯುತ್ತಾ, ಬಾಂಧವ್ಯದ ಬಂಧುರವಾಗಿದ್ದು, ಅನ್ಯರನ್ನು ಮನದಲ್ಲಿಯೂ ಪತಿಯೆಂದು ಭಾವಿಸುವುದು ಮಹಾಪಾಪವೆಂದು ಪರಿಗಣಿಸಿದ ಮೀರಾ ಆಂತರ್ಯದ ಇತ್ತಂಡ ವಾದದಲ್ಲಿ ಬಳಲಿದಳು.

ಮಾತಾ ಪಿತೃಗಳ ಸ್ಥಾನದಲ್ಲಿ ನಿಂತು. ಸಕ್ಕರೆಯ ಅಕ್ಕರೆಯಲ್ಲಿ ಪೋಷಿಸುತ್ತಾ ಬಂದವರ ಇಚ್ಛೆಗೆ ವಿರೋಧಿಸಲಾಗದೆ, ವಿವಾಹ ಒಲ್ಲೆನೆಂದು ತಿಳಿಸಲು ಮನ ಒಡಂಬಡಲಿಲ್ಲ. ಹೊರಬರಲಾರದ ವ್ಯಥೆ ಅವಳನ್ನು ಆವರಿಸಿತ್ತು. ಮೌನವೇ ವಿವಾಹಕ್ಕೆ ನಾಂದಿಯಾಯಿತು. ರಜಪೂತ ಪದ್ಧತಿಯಂತೆ ವರನ ಹಾಗೂ ವಧುವಿನ ಮನೆಯವರು ಮಾತ್ರ ನಿಶ್ಚಿತಾರ್ಥದಲ್ಲಿ ಭಾಗವಹಿಸುವುದು. ವಧು ತೆರಳುವಂತಿಲ್ಲ. ತದನಂತರದಲ್ಲಿ ವಿವಾಹದ ಕಾರ್ಯ ಕಲಾಪಗಳು ಸರಸರನೆ ಸಾಗುತ್ತಿದ್ದಂತೆ, ವಿವಾಹದ ಶುಭದಿನವೂ ಬರಬರನೆ ಆಗಮಿಸಿತು. ರಾಜ ಮನೆತನದ ವಿವಾಹವೆಂದರೆ ಕೇಳಬೇಕೆ? ಅರಮನೆಯೇನು ಇಡೀ ನಗರವೇ ವಧುವಂತೆ ಶೃಂಗಾರಗೊಂಡಿತು ಸಂಭ್ರಮ ವಿಭ್ರಮಗಳಿಂದ. ವಿವಾಹ ಪೂರ್ವ ಸಾಂಪ್ರದಾಯಿಕವಾದ ಮೆಹೆಂದಿ, ಅರಿಶಿನ ಮೊದಲಾದ ಶಾಸ್ತ್ರಗಳಲ್ಲಿ, ಗೆಳತಿಯರು ಮೀರಾಳನ್ನು ಛೇಡಿಸಿದರೂ, ಅವಳ ಕದಪುಗಳು ರಾಗ